ಸಾಕ್ಷಿಯನ್ನು ಇಂದು ದಿನಾಂಕಃ *17.08.2024* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ಪ್ರತಿವಾದಿ ನಂ.೫ರ ಪರ ಶ್ರೀ ಕೆ.ಯು.ಐ.. ವಕೀಲರಿಂದ**

ನನ್ನ ಜಮೀನು ಜವಳಗಾ(ಜೆ) ಗ್ರಾಮದಿಂದ 2 ಕಿ.ಮೀ. ಅಂತರದಲ್ಲಿ ಉತ್ತರ ದಿಕ್ಕಿಗೆ ಬರುತ್ತದೆ. ನನ್ನ ಜಮೀನಿಗೆ ಹೋಗಬೇಕಾದರೆ ಜಮೀನು ಸ.ನಂ. 95 ಮೊದಲು ಬರುತ್ತದೆ, ನಂತರ 94 ಬರುತ್ತದೆ. ಸ.ನಂ.95 ರಲ್ಲಿ ನನ್ನದು 4 ನೇ ಹಿಸ್ಸಾ ಇರುತ್ತದೆ. ಜವಳಗಾ(ಜೆ)ದಿಂದ ಗೊಂಜೋಟಿ ಗ್ರಾಮಕ್ಕೆ ಹೋಗುವ ರಸ್ತೆಯು ನನ್ನ ಜಮೀನಿನ ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಸದರಿ ಜಮಗಾ(ಜೆ) ದಿಂದ ಗುಂಜೋಟಿ ಗ್ರಾಮಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡು ಹಿಸ್ಸಾ ನಂ.4 ಬರುತ್ತದೆ, ನಂತರ ಹಿಸ್ಸಾ ನಂ.3, 2, 1 ಬರುತ್ತದೆ ಎಂದರೆ ಸರಿ. ಸ.ನಂ.95 ನಮ್ಮದೇ ಜಮೀನು ಇರುತ್ತದೆ ಎಂದರೆ ಸರಿ. ಸ.ನಂ.95 ನ್ನು ಪೂರ್ವ-ಪಶ್ಚಿಮವಾಗಿ ಪಟ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸ.ನಂ.95 ರಲ್ಲಿರುವ ಮಳೆ ನೀರು ನಮ್ಮ ಜಮೀನಿನ ಮೂಲಕವೇ ಪೂರ್ವ ದಿಕ್ಕಿನಲ್ಲಿರುವ ರಸ್ತೆಗೆ ಬರುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಸ.ನಂ.94 ರಲ್ಲಿ ಹೋಗುತ್ತದೆ ಎಂದು ನುಡಿಯುತ್ತಾರೆ. ಸ.ನಂ.94 ರಲ್ಲಿ ಸಹ ಕೂಡ ಮಳೆ ನೀರು ಅದರ ಪೂರ್ವ ದಿಕ್ಕಿನಲ್ಲಿರುವ ಸದರಿ ರಸ್ತೆಗೆ ಬರುತ್ತದೆ ಎಂದರೆ ಸರಿ ಅಲ್ಲ, ಅದು ಸೀಮೆಗುಂಟ ಹೋಗುತ್ತದೆ ಎಂದು ನುಡಿಯುತ್ತಾರೆ. ಸ.ನಂ.94 ರ ನೀರು ಎಲ್ಲಿ ಹೋಗುತ್ತದೆ ಎಂಥರೆ ಸಾಕ್ಷಿಯು ಮಹಾರಾಷ್ಟ್ರದ ಸೀಮೆಗುಂಟ ಹೋಗುತ್ತದೆ ಎಂದು ನುಡಿಯುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಸೀಮೆ 30 ಫೀಟು ಅಗಲವಿದೆ ಎಂದು ಸುಳ್ಳು ಬರೆಸಿರುತ್ತೇನೆ ಎಂಥರೆ ಸರಿ ಅಲ್ಲ. ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಸೀಮೆ 30 ಫೀಟು ಇದೆ ಎಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ, ಸದರಿ ಸೀಮೆಯು ಕೇವಲ 2 ರಿಂದ 3 ಫೀಟು ಇರುತ್ತದೆ ಎಂದರೆ ಸರಿ ಅಲ್ಲ. ನಾನು ಈ ದಾವೆಯನ್ನು ಹೂಡುವುದಕ್ಕಿಂತ ಪೂರ್ವದಲ್ಲಿ ಓ.ಎಸ್. ನಂ. 16/2005 ನ್ನು ಹೂಡಿದ್ದೆನು ಎಂದರೆ ಸರಿ. ಸದರಿ ದಾವೆಯು ಈ ನ್ಯಾಯಾಲಯದಲ್ಲಿ ಡಿಸಮಿಸ್ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯದಲ್ಲಿ ಸದರಿ ಓ.ಎಸ್. ನಂ. 16/2005 ರ ವಿರುದ್ದ ಮೇಲ್ಮನವಿಯನ್ನು ಆರ್.ಎ.ನಂ. 12/2006 ನ್ನು ದಾಖಲಿಸಿದ್ದೇನು ಎಂದರೆ ಸರಿ. ಕೆಳ ನ್ಯಾಯಾಲಯದಲ್ಲಿ ಸ.ನಂ.94 ರವರಿಗೆ ನಮ್ಮ ಜಮೀನಿನ ಮೂಲಕ ದಾರಿ ಇದೆ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಮಹರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಸೀಮೆ 30 ಫೀಟ್ ಇದೆ ಎಂದು ಹೇಳುತ್ತಿರಲ್ಲ, ಅದು ಮಹಾರಾಷ್ಟ್ರ ರಾಜ್ಯದ 30 ಫೀಟೋ ಅಥವಾ ಕರ್ನಾಟಕ ರಾಜ್ಯದ 30 ಫೀಟೋ ಎಂದರೆ ಸಾಕ್ಷಿ ಎರಡನ್ನು ಸೇರಿಸಿ 30 ಫೀಟ್ ಇದೆ

ಎಂದು ನುಡಿಯುತ್ತಾರೆ. ನಾನು ಎರಡು ರಾಜ್ಯದ್ದು ಸೇರಿ 30 ಫೀಟ ಇದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ನಾನು 1975 ರಲ್ಲಿ ದಾವಾ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ, ಮೂಲತಃ ಸದರಿ ಜಮೀನು ಶಿವಲಿಂಗಪ್ಪ ದೇವರಾಯ ಶಿವಪೂರ್ತಿ ರವರ ಜಮೀನು ಇರುತ್ತದೆ ಎಂದರೆ ಸರಿ ಅಲ್ಲ. ಸದರಿ ಶಿವಲಿಂಗಪ್ಪರವರ ಕಡೆಯಿಂದ ಸದರಿ ಜಮೀನನ್ನು ಶಿವಶಂಕರರವರು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸದರಿ ಶಿವಶಂಕರ ಕಡೆಯಿಂದ ನಾನು ಖರೀದಿ ಹಿಡಿದಿರುತ್ತೇನೆ ಎಂಧರೆ ಸರಿ. ಸದರಿ ನಾನು ಖರೀದಿ ಹಿಡಿಯುವ ಸಮಯದಲ್ಲಿ ನನ್ನ ಜಮೀನು ಕೇವಲ 12 ಎ-02 ಗುಂಟೆ ಇತ್ತು ಎಂದರೆ ಸರಿ. ಪ್ರತಿವಾದಿ ನಂ.೧ ಮತ್ತು ೨ ರವರು ತಮ್ಮ ಜಮೀನನ್ನು ಗುರುಲಿಂಗಪ್ಪ ಕಲ್ಲಪ್ಪ ಚಿಂಚೋಳಿ ಅವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಗುರುಲಿಂಗಪ್ಪನ ಹೆಸರಿನಲ್ಲಿ 7 ಎ-05 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 7 ಎ-05 ಗುಂಟೆ ಜಮೀನಿನಲ್ಲಿ ಪ್ರತಿವಾದಿ ನಂ.೧ ರವರು 4 ಎ-00 ಗುಂಟೆ ಜಮೀನನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.2 ರವರು 3 ಎ-05 ಗುಂಟೆ ಜಮೀನನ್ನು ಖರೀದಿ ಹಿಡಿದಿರುತ್ತಾರೆ ಎಂಧರೆ ಸರಿ. ಅದು ಒಟ್ಟು 7 ಎ-05 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನಾನು ನನ್ನ ವಾದ ಪತ್ರದ ಹಾತ ನಕಾಶೆಯಲ್ಲಿ ಪ್ರತಿವಾದಿ ನಂ.೧ ಮತ್ತು ೨ ರವರ ಜಮೀನು ಒಟ್ಟು 7 ಎ-05 ಗುಂಟೆ ಇರುತ್ತದೆ ನಾನು ಕೇವಲ 4 ಎಕರೆ ಎಂದು ತಪ್ಪಾಗಿ ತೋರಿಸಿರುತ್ತೇನೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಅದು ಕೇವಲ ಪ್ರತಿವಾದಿ ನಂ.೧ ರವರ ಜಮೀನು ಮಾತ್ರ ತೋರಿಸಿದ್ದೇನೆ ಎಂದು ನುಡಿಯುತ್ತಾರೆ. ಕೇವಲ ಪ್ರತಿವಾದಿ ನಂ.೧ ರವರ ಜಮೀನನ್ನು ಮಾತ್ರ ತೋರಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಜಮೀನು ಸ.ನಂ.94 ಕೇವಲ 12 ಎ-02 ಗುಂಟೆ ಇರುತ್ತದೆ, 12 ಎ-07 ಗುಂಟೆ ಇರುವುದಿಲ್ಲ ಎಂದರೆ ಸರಿ.

ನಮ್ಮ ಊರಿನಿಂದ ಹೊರಗೆ ಬಿದ್ದರೆ ಯಾವ ಜಮೀನು ಪ್ರಾರಂಭವಾಗುತ್ತದೆಯೋ ಆ ಜಮೀನನ್ನು ಹಿಡಿದು ದಾವಾ ಜಮೀನಿನವರೆಗೆ ದಾರಿ ಇರುತ್ತದೆ ಎಂಧರೆ ಸರಿ ಅಲ್ಲ. ಸನಂ.94 ರಲ್ಲಿ ಏನಾದರೂ ಹಿಸ್ಸಾಗಳಾದರೆ ಅವರವರ ಜಮೀನಿನ ಮೂಲಕವೇ ಅಂದರೆ ಸ.ನಂ.94 ರ ಮೂಲಕವೇ ಅದರ ಹಿಸ್ಸಾಗಳಲ್ಲಿ ದಾರಿ ಬರುತ್ತದೆ ಸ.ನಂ.95 ರಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿ ಅಪಸಥ ರಾಜಿ ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

[ ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು. ]

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.